**ಕರ್ನಾಟಕ ಸರ್ಕಾರ**

**ಸಂಖ್ಯೆ:** ಡಿಟಿಇ/427/ಎಸಿಎಂ(2)/2016-17

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು - 560 001,
ದಿನಾಂಕ:03-06-2017.

**-:: ಸುತ್ತೋಲೆ ::-**

**ವಿಷಯ:** 2017-18ನೇ ಸಾಲಿನಲ್ಲಿ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ಸೇರ ಬಯಸುವ ಅಭ್ಯರ್ಥಿಗಳು ಮರುಮೌಲ್ಯ ಮಾಪನ, ಅಂಕಗಳ ಮರು ಎಣಿಕೆ ಹಾಗೂ ಪೂರಕ ಪರೀಕ್ಷೆಗೆ ಅರ್ಜಿ ಸಲ್ಲಿಸಿರುವಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:**
1. ಈ ಕಛೇರಿ ಸಮಸಂಖ್ಯೆ ಪ್ರವೇಶಾಧಿಸೂಚನೆ ದಿನಾಂಕ:09-05-2017.
2. ಈ ಕಛೇರಿ ಸಮಸಂಖ್ಯೆ ಸುತ್ತೋಲೆ ದಿ:25-05-2017.
3. ಸರ್ಕಾರದ ಆದೇಶ ಸಂ. ಇಡಿ 207 ಟಿಜಿಎಲ್ 2016, ದಿ:20-03-2017.

**-0000000-**

ಉಲ್ಲೇಖ(1) & (2)ರ ಈ ಕಛೇರಿ ಪ್ರವೇಶಾಧಿಸೂಚನೆಯಲ್ಲಿ ಪ್ರಥಮ ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು **ದಿನಾಂಕ: 05-06-2017 ರಂದು** ಕಡೆಯ ದಿನಾಂಕವಾಗಿರುತ್ತದೆ. ಆದರೆ, ಅಭ್ಯರ್ಥಿಗಳು **ಮರುಮೌಲ್ಯ ಮಾಪನ, ಅಂಕಗಳ ಮರು ಎಣಿಕೆ ಹಾಗೂ ಪೂರಕ ಪರೀಕ್ಷೆಗೆ ಅರ್ಜಿ ಸಲ್ಲಿಸಿರುವಂತಹ ಅಭ್ಯರ್ಥಿಗಳ** ಶೈಕ್ಷಣಿಕ ಹಿತದೃಷ್ಟಿಯಿಂದ ಪರಿಗಣಿಸಿ, ಸದರಿ ಅಭ್ಯರ್ಥಿಗಳು ಅರ್ಜಿಯನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು, ರಾಜ್ಯದ 121 ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್ **"ದಾಖಲೆ ಪರಿಶೀಲನೆ ಹಾಗೂ ಆನ್‌ಲೈನ್ ಅರ್ಜಿ ಸಲ್ಲಿಕೆ ಕೇಂದ್ರ"** (Online Application Submission/Document Verification Centre) ಗಳಲ್ಲಿ **ದಿನಾಂಕ: 05-06-2017 ರೊಳಗೆ** ಅರ್ಜಿಯಲ್ಲಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಕಾಲಂಗಳಲ್ಲಿ ಫಲಿತಾಂಶ ಬಾರದಿದ್ದ ಪಕ್ಷದಲ್ಲಿ ಶೂನ್ಯ ಎಂದು ನಮೂದಿಸಿ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸತಕ್ಕದ್ದು.

**ನಂತರ, ಪರೀಕ್ಷೆಯ ಫಲಿತಾಂಶ ಬಂದ ಕೂಡಲೇ ತಾವುಗಳು ಪಡೆದ ಅಂಕಗಳನ್ನು ಈಗಾಗಲೇ ಪ್ರಕಟಿಸಿದ ಯಾವುದಾದರೂ 121 ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್ "ದಾಖಲೆ ಪರಿಶೀಲನೆ ಹಾಗೂ ಆನ್‌ಲೈನ್ ಅರ್ಜಿ ಸಲ್ಲಿಕೆ ಕೇಂದ್ರ" Online Application Submission/Document Verification Centre ಗಳಲ್ಲಿ ಸಲ್ಲಿಸಿ ತಮ್ಮ ಮೆರಿಟ್ ಸಂಖ್ಯೆಯನ್ನು ಪಡೆದು, ನಿಗದಿಪಡಿಸಿರುವ ವೇಳಾಪಟ್ಟಿಯನುಸಾರ ತಮ್ಮ ಮೆರಿಟ್‌ಗನುಗುಣವಾಗಿ ಸಂಬಂಧಪಟ್ಟ "ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್ ಕೇಂದ್ರ / ಪ್ರವೇಶ ಘಟಕ" ಗಳಲ್ಲಿ ಕೌನ್ಸಲಿಂಗ್ ಪ್ರವೇಶ ಪ್ರಕ್ರಿಯೆಗೆ ಹಾಜರಾಗಿ ಸೀಟು ಆಯ್ಕೆ ಮಾಡಿಕೊಳ್ಳುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.**

*ವಿ.ಸೂ:- CBSE/ICSE ಪರೀಕ್ಷೆ ಬರೆದ ಅಭ್ಯರ್ಥಿಗಳ ಅರ್ಹತಾ ಪ್ರಮಾಣ ಪತ್ರದ ಶುಲ್ಕ ರೂ.1000/- ನ್ನು ಆಯಾ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿಯೇ ಪಾವತಿಸಿ, ಅರ್ಜಿ ನೊಂದಣಿ ಮಾಡಿಕೊಳ್ಳಲು ಸೂಚಿಸಲಾಗಿದೆ.*

ಹೆಚ್ಚಿನ ಮಾಹಿತಿಗಾಗಿ ತಾಂತ್ರಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್ www.dte.kar.nic.in ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ www.kea.kar.nic.in ಅನ್ನು ನೋಡಲು ಕೋರಿದೆ.

ನಿರ್ದೇಶಕರು

**ಗೆ,**

**ಎಲ್ಲಾ 121 ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ,**

**ಪ್ರತಿ:-**

1. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತಾಂ.ಶಿ.ನಿ, ಬೆಂಗಳೂರು.
4. ನಿರ್ದೇಶಕರ ಆಪ್ತಶಾಖೆಗೆ.
5. ಸಂಯೋಜನಾಧಿಕಾರಿಗಳು, ತಾಂ.ಶಿ.ನಿ, (ಈ ಸುತ್ತೋಲೆಯನ್ನು ನಿರ್ದೇಶನಾಲಯದ ಅಂತರ್ ಜಾಲದಲ್ಲಿ